KACM210000632024

**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ರವರ ನ್ಯಾಯಾಲಯ, ಕಡೂರು.**

**ಉಪಸ್ಥಿತರು**

**ಶ್ರೀಮತಿ.ಸವಿತರಾಣಿ ಹೆಚ್.ವಿ.** ಬಿ.ಎ.ಎಲ್, ಎಲ್‌ಎಲ್.ಬಿ.,
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಕಡೂರು.
ಸಮವರ್ತಿ ಪ್ರಭಾರ 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಕಡೂರು.

**ದಿನಾಂಕ 21 ನೇ ಫೇಬ್ರವರಿ, 2024**

**ಅಸಲು ದಾವಾಸಂಖ್ಯೆ: 20/2024**

ವಾದಿ : **ಶ್ರೀಮತಿ ಸುಪ್ರಿಯಾ.ಪಿ.**
ಕೋಂ ಅಮರ್ ಹರೀಶ್.ಎಸ್,
ಸುಮಾರು 35 ವರ್ಷ,
ಸಹ ತರಬೇತುದಾರರು,
# 51, 4 ನೇ ತಿರುವು,
7 ನೇ ಮುಖ್ಯ ರೈಲ್ವೆ ಲೇಔಟ್,
2 ನೇ ಹಂತ, ಬೆಂಗಳೂರು ದಕ್ಷಿಣ,
ಬೆಂಗಳೂರು.

(ಪ್ರತಿನಿಧಿಸುವವರು - ಶ್ರೀಮತಿ ಹೆಚ್.ಎಂ.ಪಿ. ವಕೀಲರು)

**-ವಿರುದ್ದ-**

ಪ್ರತಿವಾದಿ: **ತಹಶೀಲ್ದರ್,**
ತಹಶೀಲ್ದಾರ್ ರವರ ಕಛೇರಿ,
ಕಡೂರು ವಿಭಾಗ, ಕಡೂರು,
ಕಡೂರು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ

(ಪ್ರತಿವಾದಿಯನ್ನು ಪ್ರತಿನಿಧಿಸುವವರು - ಎ.ಪಿ.ಪಿ)

:: **<u>ಮಧ್ಯಂತರ ಅರ್ಜಿ ಸಂಖ್ಯೆ: 2 ರ ಪಕ್ಷಗಾರರು</u>** ::

**ಅರ್ಜಿದಾರರು: ಶ್ರೀಮತಿ ಸುಪ್ರಿಯಾ.ಪಿ.**

**-ವಿರುದ್ದ-**

**ಎದುರುದಾರರು: ತಹಶೀಲ್ದಾರ್**

:: **<u>ಮಧ್ಯಂತರ ಅರ್ಜಿ ಸಂಖ್ಯೆ - 2 ರ ಮೇಲಿನ ಆದೇಶ</u>** :

ಪ್ರಸ್ತುತ ಈ ಮಧ್ಯಂತರ ಅರ್ಜಿ-2 ನ್ನು ವಾದಿಯು ಪ್ರತಿವಾದಿಯ ವಿರುದ್ಧ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ ಕಲಂ 151 ರ ರೀತ್ಯಾ ಸಲ್ಲಿಸಿರುತ್ತಾರೆ.

**2.** ವಾದಿಯು ಶಾಶ್ವತ ತಡೆಯಾಜ್ಞೆಯನ್ನು ಕೋರಿ ಸದರಿ ದಾವೆಯನ್ನು ಪ್ರತಿವಾದಿಯ ವಿರುದ್ಧ ಸಲ್ಲಿಸಿದ್ದು, ವಾದಿಯು ಮಧ್ಯಂತರ ಅರ್ಜಿ - 2 ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ ಕಲಂ 39 ನಿಯಮ 1 ಮತ್ತು 2 ಮತ್ತು ಸಹಕಲಂ 151 ರಡಿಯಲ್ಲಿ ಸಲ್ಲಿಸಿದ್ದು, ಈ ದಾವೆಯ ಅಂತಿಮವಾಗಿ ತೀರ್ಮಾನವಾಗುವ ವರೆಗೂ ಪ್ರತಿವಾದಿಯಾಗಲೀ ಅಥವಾ ಅವರ ಕಡೆಯವರಾಗಲೀ ಅಥವಾ ಅವರ ಅಧೀನ ಅಧಿಕಾರಿಗಳಾಗಲೀ ದಾವಾ ಷೆಡ್ಯೂಲ್ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡದಂತೆ ವಾದಿಯ ಶಾಂತಿಯುತ ಸ್ವಾಧೀನತೆಗೆ ಅಡ್ಡಿಪಡಿಸದಂತೆ ತಾತ್ಕಾಲಿಕವಾಗಿ ನಿರ್ಬಂಧಕಾಜ್ಞೆಯ ಆದೇಶವನ್ನು ನೀಡಬೇಕೆಂದು ಪ್ರಾರ್ಥಿಸಿರುತ್ತಾರೆ.

**3.** ವಾದಿಯು ತನ್ನ ಪ್ರಮಾಣ ಪತ್ರದಲ್ಲಿ ತಿಳಿಸಿದಂತೆ, ದಾವ ಸ್ವತ್ತುನ್ನು 2022 ರಿಂದಲೂ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬರುತ್ತಿರುವುದಾಗಿ ತಿಳಿಸಿದ್ದು. ದಾವಾ ಸ್ವತ್ತು ಮೂಲತಃ ಸೈಮನ್ ಪೀಟರ್ ಬಿನ್ ಪೇತ್ರಪ್ಪರವರಿಗೆ ದಿನಾಂಕ:22.05.2018 ರಂದು ಕುಟುಂಬದ ವಿಭಾಗದ ಮೂಲಕ ಆಸ್ತಿ

Visit **ecourts.gov.in** for updates or download mobile app “**eCourts Services**” from Android or iOS

ಬಂದಿದ್ದು, ನಂತರ ದಿನಾಂಕ:07.01.2019 ರಂದು ದಾವಾ ಸ್ವತ್ತನ್ನು ಫಿಲಿಪ್ಸ್.ಪಿ ಬಿನ್ ಪಾಲ್ ವೇದಮೂರ್ತಿರವರಿಗೆ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ, ನಂತರ ವಾದಿಯು ಫಿಲಿಪ್ಸ್.ಪಿ ಬಿನ್ ಪಾಲ್ ವೇದಮೂರ್ತಿರವರಿಂದ ದಿನಾಂಕ 06.10.2022 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಸದರಿ ಆಸ್ತಿಯನ್ನು ಖರೀದಿಸಿರುವುದಾಗಿ ತಿಳಿಸಿರುತ್ತಾರೆ. ನಂತರ 2022-23 ರಲ್ಲಿ ಪಹಣಿಪತ್ರಿಕೆಯು ವಾದಿಯ ಹೆಸರಿಗೆ ಬಂದಿದ್ದು ಕಂದಾಯವನ್ನು ಪಾವತಿಸಿಕೊಂಡು ಬರುತ್ತಿರುವುದಾಗಿ ತಿಳಿಸಿರುತ್ತಾರೆ. ವಾದಿಯ ದಾವಾ ಸ್ವತ್ತನ್ನು ಖರೀದಿಸಿದ ನಂತರ ಸದರಿ ಸ್ವತ್ತಿನ ಮಾಲೀಕತ್ವವನ್ನು ಹೊಂದಿ ಸದರಿ ಸ್ವತ್ತನ್ನು ಅಭಿವೃದ್ಧಿಪಡಿಸಲು ಕೈ ಸಾಲ ಮಾಡಿ ಸಾಕಷ್ಟು ಹಣವನ್ನು ಖರ್ಚು ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ದಾವಾ ಸ್ವತ್ತಿನಲ್ಲಿ ಬೋರ್ ವೆಲ್ ಕೊರೆಸಿ ಅಡಿಕೆ ಗಿಡಗಳನ್ನು, ಮಾವಿನ ಗಿಡಗಳನ್ನು ಹಾಗೂ ಇತರೆ ಗಿಡಗಳನ್ನು ಹಾಕಿರುವುದಾಗಿ ತಿಳಿಸಿರುತ್ತಾರೆ. ದಾವಾ ಸ್ವತ್ತಿಗೆ ಕಲ್ಲುಕಂಬವನ್ನು ನೆಟ್ಟಿ ತಂತಿ ಬೇಲಿಯನ್ನು ಹಾಕಲಾಗಿದೆ ಎಂದು ತಿಳಿಸಿರುತ್ತಾರೆ. ವಾದಿಯು ಬೆಂಗಳೂರಿನಲ್ಲಿ ವಾಸವಿದ್ದು ತಿಂಗಳಿಗೆ ಎರಡು ಬಾರಿ ಬಂದು ದಾವಾ ಸ್ವತ್ತನ್ನು ನೋಡಿಕೊಳ್ಳುತ್ತಿದ್ದು, ದಿನಾಂಕ 05.01.2024 ರಂದು ದಾವಾ ಸ್ವತ್ತಿಗೆ ಭೇಟಿನೀಡಿದಾಗ ದಾವಾ ಸ್ವತ್ತಿನಲ್ಲಿ ಕೆಲಸ ಮಾಡುವ ಕೆಲಸಗಾರರು ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಪ್ರತಿವಾದಿ ಕಛೇರಿಯಿಂದ ಯಾರೋ ಬಂದಿದ್ದು ದಾವಾ ಸ್ವತ್ತಿನಲ್ಲಿ ಒತ್ತುವರಿಯಾಗಿರುವ ರಸ್ತೆಯನ್ನು ತೆರವುಗೊಳಿಸುವುದಾಗಿ ತಿಳಿಸಿರುತ್ತಾರೆ. ಗ್ರಾಮದಲ್ಲಿರುವ ಜನರನ್ನು ವಿಚಾರಿಸಲಾಗಿ ಸದರಿಯವರು ದಾವಾ ಸ್ವತ್ತಿನ ಪಕ್ಕದಲ್ಲಿರುವ ಬೊಮ್ಮೇನಹಳ್ಳಿ ಗ್ರಾಮದ ಸರ್ವೇ ನಂಬರ್ 39 ರಲ್ಲಿರುವ ಸ್ಮಶಾನಕ್ಕೆ ಹೋಗಲು ಸರ್ವೇ ನಂಬರ್ 38 ರಲ್ಲಿವ ದಾರಿಯನ್ನು ಒತ್ತುವರಿ ಮಾಡಿರುವುದನ್ನು ತೆರವುಗೊಳಿಸಲು ಬಂದಿದ್ದರು ಎಂದು ಮಾಹಿತಿಯನ್ನು ತಿಳಿಸಿರುತ್ತಾರೆ.

Visit **ecourts.gov.in** for updates or download mobile app "**eCourts Services**" from Android or iOS

**4**. ಮುಂದುವರಿದು, ಪ್ರತಿವಾದಿಯು ತನಗೆ ಯಾವುದೇ ತಿಳುವಳಿಕೆ ಪತ್ರವನ್ನು ನೀಡದೆ ಮತ್ತು ಸಾಕಷ್ಟು ಕಾಲವಕಾಶವನ್ನು ನೀಡದೆ ಏಕಾಏಕಿ ದಾವಾ ಸ್ವತ್ತಿನಿಂದ ನನ್ನನ್ನು ಹೊರಹಾಕಿ ರಸ್ತೆ ಮಾಡಲು ಪ್ರಯತ್ನಿಸಿರುವುದು ನೈಸರ್ಗಿಕ ನ್ಯಾಯ ತತ್ವಕ್ಕೆ ವಿರುದ್ಧವಾಗಿರುತ್ತದೆ. ಪ್ರತಿವಾದಿಯು ದಾವಾ ಸ್ವತ್ತಿನಿಂದ ಹೊರಹಾಕುವ ಮೊದಲು ರೆವಿನ್ಯೂ ದಾಖಲೆಗಳನ್ನು ಪರಿಶೀಲಿಸಬೇಕಾಗಿರುತ್ತದೆ. ಏಕೆಂದರೆ 03.11.2003 ರಂದು ಸತ್ಯಪ್ರಮೀಳ ಎಂಬುವರು ಕಡೂರು ತಾಲ್ಲೂಕು ಬೊಮ್ಮೇನಹಳ್ಳಿಯ ಸರ್ವೆ ನಂಬರ್ 38 ರಲ್ಲಿ ರಸ್ತೆಯನ್ನು ಒತ್ತುವರಿ ಮಾಡಿದ್ದು ಅದನ್ನು ತೆರವುಗೊಳಿಸಬೇಕೆಂದು ಏಕೆಂದರೆ ಕಡೂರು ತಾಲ್ಲೂಕು ಬೊಮ್ಮೇನಹಳ್ಳಿಯ ಸರ್ವೆ ನಂಬರ್ 39 ರಲ್ಲಿರುವ ಸ್ಮಶಾನಕ್ಕೆ ಹೋಗಲು ಹಾಗೂ ಸಾರ್ವಜನಿಕರ ಬಳಕೆಗೆ ರಸ್ತೆ ಬೇಕಾಗಿರುತ್ತದೆಂದು ಅರ್ಜಿಯನ್ನು ಸಲ್ಲಿಸಿದ್ದು, ನಂತರ ಚಿಕ್ಕಮಗಳೂರಿನ ಜಿಲ್ಲಾಧಿಕಾರಿಗಳು ಪ್ರತಿವಾದಿಗೆ ಸದರಿ ವಿಚಾರವಾಗಿ ಕ್ರಮಕೈಗೊಳ್ಳುವಂತೆ ಸ್ಮಶಾನದ ರಸ್ತೆಯು ಒತ್ತುವರಿಯಾಗಿರುವುದನ್ನು ಬಿಡಿಸಿಕೊಡುವಂತೆ ತಿಳಿಸಿದ್ದು ಆ ಪ್ರಕಾರ ಪ್ರತಿವಾದಿಯು ಒತ್ತುವರಿ ಜಾಗವನ್ನು ತೆರವುಗೊಳಿಸಿ ರಸ್ತೆಯ ನಕಾಶೆಯನ್ನು ತಯಾರಿಸಿ ಗ್ರಾಮದವರ ಹೇಳಿಕೆ ಪಡೆದು ಕಡೂರು ತಾಲ್ಲೂಕು ಬೊಮ್ಮೇನಹಳ್ಳಿಯ ಸರ್ವೆ ನಂಬರ್ 38 ರ ಮಾಲೀಕರ ಹೇಳಿಕೆಯನ್ನು ಪಡೆದು ದಿನಾಂಕ 09.03.2003 ರಂದು ಚಿಕ್ಕಮಗಳೂರಿನ ಜಿಲ್ಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿರುತ್ತಾರೆ ಮತ್ತು ಸತ್ಯಪ್ರಮೀಳಾರವರಿಗೂ ಸಹ ಮಾಹಿತಿಯನ್ನು ತಿಳಿಸಲಾಗಿರುತ್ತದೆ. ದಿನಾಂಕ 25.03.2004 ರಂದು ಚಿಕ್ಕಮಗಳೂರಿನ ಜಿಲ್ಲಾಧಿಕಾರಿಗಳು ಸತ್ಯಪ್ರಮೀಳಾರವರಿಗೆ ಸರ್ವೆ ನಂಬರ್ 39 ರಲ್ಲಿರುವ ಸ್ಮಶಾನಕ್ಕೆ ರಸ್ತೆಯನ್ನು ತೆರವುಗೊಳಿಸಲಾಗಿರುತ್ತದೆ ಎಂದು ಸ್ವೀಕೃತಿಯನ್ನು ನೀಡಿರುತ್ತಾರೆ. ಸದರಿ ದಾಖಲಾತಿಗಳು ಈ ಹಿಂದೆ ರಸ್ತೆಯನ್ನು ತೆರವುಗೊಳಿಸಿರುವ ದಾಖಲಾತಿಗಳಾಗಿರುತ್ತದೆ. ಈ ಎಲ್ಲಾ ವಿಚಾರಗಳು ಪ್ರತಿವಾದಿಗೆ ಗೊತ್ತಿದ್ದರೂ ಸಹ ಈಗಾಗಲೇ ಒಂದು ರಸ್ತೆ ಇದ್ದರೂ ಸಹ

Visit **ecourts.gov.in** for updates or download mobile app “**eCourts Services**” from Android or iOS

ವಾದಿಯನ್ನು ಕಡೂರು ತಾಲ್ಲೂಕು ಬೊಮ್ಮೇನಹಳ್ಳಿಯ ಸರ್ವೆ ನಂಬರ್ 39 ರಲ್ಲಿರುವ ಸ್ಮಶಾನಕ್ಕೆ ಹೋಗುವ ದಾರಿಯ ಉದ್ದೇಶಕ್ಕಾಗಿ ಪುನಃ ವಾದಿಯನ್ನು ತನ್ನ ಸ್ವತ್ತಿನಿಂದ ತೆರವುಗೊಳಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ತಿಳಿಸಿರುತ್ತಾರೆ. ವಾದಿಯು ಮುಂದುವರಿದು ಹೇಳುವುದೇನೆಂದರೆ ದಾವಾ ಸ್ವತ್ತನ್ನು ಹೊರತುಪಡಿಸಿ ತನಗೆ ಯಾವುದೇ ಕೃಷಿ ಭೂಮಿ ಇರುವುದಿಲ್ಲ ಸದರಿ ಆಸ್ತಿಯನ್ನು ತನ್ನ ಸ್ವಯಾರ್ಜಿತ ಗಳಿಕೆಯಿಂದ ಖರೀದಿಸಿದ ಆಸ್ತಿಯಾಗಿರುತ್ತದೆ. ಪ್ರತಿವಾದಿಯು ತನ್ನ ಅಧಿಕಾರವನ್ನು ಉಪಯೋಗಿಸಿಕೊಂಡು ದಾವಾ ಸ್ವತ್ತಿನಿಂದ ತನ್ನನ್ನು ಹೊರಹಾಕಿ ಸ್ಮಶಾನಕ್ಕೆ ಹೋಗಲು ರಸ್ತೆಯನ್ನು ಮಾಡಲು ಮುಂದಾಗಿದ್ದು ದಾವಾ ಷೆಡ್ಯೂಲ್ ಆಸ್ತಿಯಲ್ಲಿರುವ ಅಡಿಕೆ ಮತ್ತು ಮಾವಿನ ಬೆಳೆಗೆ ತೊಂದರೆ ನೀಡಲು ಪ್ರಯತ್ನಿಸಿರುತ್ತಾರೆ. ಜೊತೆಗೆ ದಾವಾ ಸ್ವತ್ತಿನ ಸುತ್ತಲು ಹಾಕಿರುವ ತಂತಿಕಂಬ ಮತ್ತು ತಂತಿಬೇಲಿಗೆ ತೊಂದರೆ ನೀಡಲು ಪ್ರಯತ್ನಿಸಿರುತ್ತಾರೆ. ಪ್ರತಿವಾದಿಯ ಈ ಕಾನೂನುಬಾಹಿರ ಕೃತ್ಯವನ್ನು ತಡೆಯಲು ನ್ಯಾಯಾಲಯದ ಆದೇಶವಿಲ್ಲದೆ ಕಷ್ಟಸಾದ್ಯವಾಗಿರುತ್ತದೆ. ಆದ್ದರಿಂದ ನ್ಯಾಯಾಲಯವು ಪ್ರತಿವಾದಿಯ ವಿರುದ್ದ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ.

**5.** ಪ್ರತಿವಾದಿಯರ ಪರ ವಕೀಲರು ನ್ಯಾಯಾಲಯಕ್ಕೆ ಹಾಜರಾಗಿದ್ದು, ಸದರಿ ಮಧ್ಯಂತರ ಅರ್ಜಿ-2 ಕ್ಕೆ ತಮ್ಮ ಪರ ತಕರಾರನ್ನು ಸಲ್ಲಿಸಿರುತ್ತಾರೆ.

**6**. ಪ್ರತಿವಾದಿ ಪರ ಸಲ್ಲಿಸಿದ ತಕರಾರಿನಲ್ಲಿ ತಿಳಿಸಿರುವ ಅಂಶಗಳೆಂದರೆ, ಕಡೂರು ತಾಲ್ಲೂಕು, ಸಖರಾಯಪಟ್ಟಣ ಹೋಬಳಿಯ ಎಸ್.ಬೊಮ್ಮೇನಹಳ್ಳಿ ಗ್ರಾಮಸ್ಥರು, ಎಸ್.ಬೊಮ್ಮೇನಹಳ್ಳಿ ಗ್ರಾಮದ ಸರ್ವೆ ನಂಬರ್ 39 ರಲ್ಲಿರುವ ರುದ್ರಭೂಮಿ ಮತ್ತು ಗೋಕಟ್ಟೆಗೆ ಸಂಪರ್ಕಿಸುವ ಬಂಡಿದಾರಿಯನ್ನು ಸರ್ವೇ ನಂಬರ್ 38 ರಲ್ಲಿರುವ ಖಾತೆದಾರರು ಒತ್ತುವರಿ ಮಾಡಿಕೊಂಡು ತೊಂದರೆ ನೀಡುತ್ತಿದ್ದಾರೆಂದು, ಸದರಿ ಒತ್ತುವರಿಯಾಗಿರುವ ಪ್ರದೇಶವನ್ನು ಗುರುತಿಸಿ ಒತ್ತವರಿಯನ್ನು ತೆರುವುಗೊಳಿಸುವಂತೆ ಗ್ರಾಮಸ್ಥರು ತಹಶೀಲ್ದಾರ್ ರವರ ಕಛೇರಿ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ತಹಶೀಲ್ದಾರ್ ರವರು

ಸರ್ವೇ ನಂಬರ್ 38 ರಲ್ಲಿರುವ ಖಾತೆದಾರರಿಗೆ ದಿನಾಂಕ 28.12.2023 ರಂದು ಒತ್ತುವರಿಯನ್ನು ತೆರವುಗೊಳಿಸಲು ನೋಟೀಸ್ ನೀಡಿದ್ದು ನೋಟೀಸ್ ತಲುಪಿದ 7 ದಿನಗಳ ಒಳಗಾಗಿ ತೆರವುಗೊಳಿಸದೆ ಇದ್ದಲ್ಲಿ ಕರ್ನಾಟಕ ಭೂಕಂದಾಯ ಅಧಿನಿಯಮ 1964 ಕಲಂ 104 ರೀತ್ಯ ಒತ್ತುವರಿಯನ್ನು ತೆರವುಗೊಳಿಸಿ ದಿನಾಂಕ:05.01.2024 ರಂದು ಕ್ರಮವಹಿಸಲಾಗುವುದು ಎಂದು ತೆರವು ಕಾರ್ಯಕ್ಕೆ ತಗಲುವ ವೆಚ್ಚವನ್ನು ತಮ್ಮಿಂದ ಭೂಕಂದಾಯ ಬಾಕಿಯಂತೆ ವಸೂಲಿ ಮಾಡಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಾಗಿಸುವುದಾಗಿ ಎಂದು ತಿಳಿಯಪಡಿಸಿದ್ದು ಇರುತ್ತದೆ. ಈ ವಿಚಾರವಾಗಿ ಬಂಡಿ ದಾರಿಯನ್ನು ಗುರುತಿಸಿ ಒತ್ತುವರಿ ಕಂಡುಬಂದಲ್ಲಿ ಒತ್ತುವರಿದಾರರ ವಿವರದೊಂದಿಗೆ ಸರ್ವೇ ನಕಾಶೆಯನ್ನು ಸಲ್ಲಿಸಲು ಈ ಕಛೇರಿಯ ಪತ್ರ ದಿನಾಂಕ 27.09.2023 ರಂತೆ ತಾಲ್ಲೂಕು ಭೂಮಾಪಕರು ಸಖರಾಯಪಟ್ಟಣ ಹೋಬಳಿ ರಾಜಸ್ವ ನಿರೀಕ್ಷಕರಿಗೆ ಪತ್ರ ಬರೆಯಲಾಗಿರುತ್ತದೆ. ಈ ಬಗ್ಗೆ ತಾಲ್ಲೂಕು ಭೂಮಾಪಕರು ಸ್ಥಳ ಪರಿಶೀಲಿಸಿ ಎಸ್.ಬೊಮ್ಮೇನಹಳ್ಳಿ ಗ್ರಾಮದ ಸರ್ವೆ ನಂಬರ್ 39 ರಲ್ಲಿರುವ ರುದ್ರಭೂಮಿ ಸಂರ್ಪಕಿಸುವ ಬಂಡಿ ದಾರಿಯನ್ನು ಸರ್ವೆ ನಂಬರ್ 38/5 ರ ಆರ್ ಟಿ ಸಿ ದಾರರಾದ ಸುಪ್ರಿಯ ಕೋಂ ಅಮರ್ ಹರೀಶ್ ಎಸ್ ತಮ್ಮು ಸರ್ವೇ ನಂಬರ್ 40/1 ರ ಆರ್.ಟಿ.ಸಿ.ದಾರರಾದ ಎ.ಆರ್ಶಿವಾದಪ್ಪ ಬಿನ್ ಅಂಡ್ರೋಯಂ, ಸಾಮ್ಯುಯಲ್ ಪ್ರಸನ್ನಕುಮಾರ್, ಆನಂದ ಕುಮಾರ್ ಬಿನ್ ಇಸ್ರಾಯಿಲ್ ರತ್ನಕುಮಾರ್, ಸಂಪತ್ ಕುಮಾರ್ ಬಿನ್ ಲೇಟ್ ಮೋಹನ್ ಕುಮಾರ್, ಆನಂದಕುಮಾರ್ ಬಿನ್ ಇಸ್ರಾಯಿಲ್ ರತ್ನಕುಮಾರ್, ಸಾಮಿತ್ರಮ್ಮ ಕೋಂ ಎ. ಆಡ್ರೋ ಸಚ್ಚಿನಾಂದ ಎ ಸುಕುಮಾರ್, ಎ. ವಿಜಯಕುಮಾರ್ ರಾಜರತ್ನ ಬಿನ್ ಎ. ಪ್ರಭುಚಂದ್ರ ಎಂಬುವವರು ಒತ್ತುವರಿ ಮಾಡಿಕೊಂಡಿರುತ್ತಾರೆಂದು ನಕ್ಷೆಯಲ್ಲಿ ನಮೂದಿಸಿ ಸರ್ವೇ ನಕಾಶೆಯನ್ನು ತಯಾರಿಸಿ ಗ್ರಾಮಸ್ಥರ ಸಮಕ್ಷಮ ಮಹಜರು ಕ್ರಮ ಜರುಗಿಸಿ ಸದರಿ ದಾಖಲಾತಿಗಳನ್ನು ತಹಶಿಲ್ದಾರ್ ರವರ ಕಛೇರಿಗೆ ಸಲ್ಲಿಸಿರುತ್ತಾರೆ

Visit **ecourts.gov.in** for updates or download mobile app “**eCourts Services**” from Android or iOS

ಹಾಗೂ ನೋಟೀಸ್ ಪ್ರತಿಯನ್ನು ಸಲ್ಲಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಒತ್ತುವರಿದಾರರಿಗೆ ಈ ಕಛೇರಿಯಿಂದ ಸಂಖ್ಯೆ.ಎಂ.ಎಜಿ[ಒತ್ತುವರಿ] 0.95/2023-24 ದಿನಾಂಕ 28.12.2023 ರಂತೆ ಕರ್ನಾಟಕ ಭೂಕಂದಾಯ ಕಾಯಿದೆ ಅಧಿನಿಮಯ 1964 ಕಲಂ.104 ರೀತ್ಯ ಒತ್ತುವರಿ ಮಾಡಿರುವ ಪ್ರದೇಶವನ್ನು 7 ದಿನದೊಳಗಾಗಿ ತೆರವು ಮಾಡಲು ಸೂಚಿಸಿ ನೋಟೀಸ್ ನೀಡಲಾಗಿರುತ್ತದೆ. ಮೇಲ್ಮನವಿದಾರರು ನ್ಯಾಯಾಲಯಕ್ಕೆ ಈ ಹಿಂದೆಯೇ ಶ್ರೀಮತಿ ಸತ್ರಯ ಪ್ರಮೀಳಾಂಬ ಎಂಬುವವರು ಸರ್ವೇ ನಂಬರ್ 38/5 ರಲ್ಲಿರುವ ಬಂಡಿದಾರಿಯನ್ನು ಒತ್ತುವರಿ ಮಾಡಿಕೊಂಡಿರುವುದನ್ನು ತೆರವುಗೊಳಿಸಬೇಕೆಂದು ದೂರು ಸಲ್ಲಿಸಿರುವಂತೆ ಅಂದಿನ ಜಿಲ್ಲಾಧಿಕಾರಿಗಳ ಕಛೇರಿಯಿಂದ ಸ.ನಂ.38 ರಲ್ಲಿರುವ ನಕಾಶೆಕಂಡ ದಾರಿಯನ್ನು ಬಿಡಿಸಲಾಗಿರುತ್ತದೆಂದು ಮಾಹಿತಿ ನೀಡಿದ್ದು ಆದರೆ ಪ್ರಸ್ತುತ ಜಮೀನಿನಲ್ಲಿ ಮತ್ತೊಮ್ಮೆ ಬಂಡಿದಾರಿಯನ್ನು ಬಿಡಿಸುತ್ತಿರುವುದು ದುರುದ್ದೇಶದಿಂದ ಕೂಡಿರುತ್ತದೆಂದು ಹೇಳಿರುವುದು ಸುಳ್ಳಾಗಿರುತ್ತದೆ. ಮೇಲನವಿದಾರರು ಸರ್ಕಾರಿ ಆಸ್ತಿಯನ್ನು ಒತ್ತುವರಿ ಮಾಡಿಕೊಂಡು ವಂಚಿಸಿರುತ್ತಾರೆ. ಒತ್ತುವರಿಯನ್ನು ತೆರವು ಮಾಡಿರುವುದಿಲ್ಲ. ಆದ್ದರಿಂದ ವಾದಿಯು ಸಲ್ಲಿಸಿರುವ ಅರ್ಜಿಯನ್ನು ಕಾರ್ಯ ಸಹಿತ ವಜಾ ಮಾಡುವಂತೆ ಪ್ರಾರ್ಥಿಸಿರುತ್ತಾರೆ. ಒತ್ತುವರಿದಾರರು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿದ್ದು ಅವರು ಯಾವುದೇ ಸಮಂಜಸವಾದ ಉತ್ತರ ನೀಡಿರುವುದಿಲ್ಲ. ಸರ್ಕಾರಿ ಜಮೀನಿನ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಹಾಗೂ ಸರ್ಕಾರವನ್ನು ಪಕ್ಷಗಾರರನ್ನಾಗಿ ಮಾಡುವ ಮುನ್ನ ಮುಖ್ಯ ಕಾರ್ಯದರ್ಶಿ ಬೆಂಗಳೂರು ಇವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನಿರ್ಬಂಧಕಾಜ್ಞೆಯನ್ನು ಕೊಡುವುದರಿಂದ ಅಥವಾ ನಿರಾಕರಿಸುವುದರಿಂದ ಯಾರಿಗೆ ಹೆಚ್ಚು ಹಾನಿ ಸಂಭವಿಸುತ್ತದೆ ಮತ್ತು ಅದು ತುಂಬಲಾರದ ಹಾನಿಯೇ ಎಂಬ ಸಂಗತಿಗಳನ್ನು ಗಮನಿಸಬೇಕೆಂದು 1970 (2) ಮೈಸೂರು ಲಾ.ಜ. 82 ರ ತೀರ್ಪಿನಲ್ಲಿ ಘನ ನ್ಯಾಯಾಲಯ ಸ್ಪಷ್ಟವಾಗಿ ನಿರ್ಣಯಿಸಿದೆ. ಈ ಸಂಗತಿಯನ್ನು

ಗಮನಿಸಿದಾಗ ತಡೆಯಾಜ್ಞೆ ನೀಡಿದರೆ ಸರ್ಕಾರಕ್ಕೆ ಹೆಚ್ಚು ಹಾನಿಯಾಗುವ ಕಾರಣ ಈ ಅರ್ಜಿಯನ್ನು ಪುರಸ್ಕರಿಸಬಾರದಾಗಿ ಪ್ರಾರ್ಥಿಸಿರುತ್ತಾರೆ. ವಾದಿಯ ಈ ಅರ್ಜಿಯನ್ನು ಪುರಸ್ಕರಿಸಿ ತಡೆಯಾಜ್ಞೆ ನೀಡಿದಲ್ಲಿ ಗ್ರಾಮಸ್ಥರು ಸ್ಮಶಾನಕ್ಕೆ ಹೋಗಲು ತಡೆಯಾಗುವುದರಿಂದ ತುಂಬಲಾರದ ನಷ್ಟ ಉಂಟಾಗುತ್ತದೆ. ವಾದಿಯು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿದರೆ ವಾದಿಗೆ ಯಾವುದೇ ನಷ್ಟ ಹಾಗೂ ಕಾನೂನಿನ ಹಾನಿ ಉಂಟಾಗುವುದಿಲ್ಲ. ಆದ್ದರಿಂದ ವಾದಿಯು ತಂದಿರುವ ಮಧ್ಯಂತರ ಅರ್ಜಿಯನ್ನು ವಜಾ ಗೊಳಿಸಬೇಕೆಂದು ಕೋರಿರುತ್ತಾರೆ.

**7.** ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು. ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

**8.** ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ನ್ಯಾಯಾಲಯದ ಗಮನಕ್ಕೆ ಈ ಕೆಳಕಂಡ ಅಂಶಗಳು ಪರಿಶೀಲನೆಗೆ ಉದ್ಭವಿಸಿರುತ್ತವೆ.

1. ಮೇಲ್ನೋಟಕ್ಕೆ ಸಮ್ಮತವಾದ ದಾವೆಯನ್ನು ಹೊಂದಿರುತ್ತೇನೆಂಬುದನ್ನು ವಾದಿಯು ರುಜುವಾತು ಪಡಿಸುತ್ತಾರೆಯೇ?
2. ಅನುಕೂಲತೆಯ ಒಲವು ತನ್ನ ಪರವಾಗಿ ಇರುತ್ತದೆ ಎಂಬುದನ್ನು ವಾದಿಯು ರುಜುವಾತುಪಡಿಸುತ್ತಾರೆಯೇ?
3. ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡದೆ ಇದ್ದಲ್ಲಿ, ತನಗೆ ತುಂಬಲಾರದ ನಷ್ಟಂಟಾಗುವ ಸಂಭವವಿರುತ್ತದೆ ಎಂಬುದನ್ನು ವಾದಿಯು ರುಜುವಾತುಪಡಿಸುತ್ತಾರೆಯೇ?
4. ಯಾವ ಆದೇಶ?

**9.** ನ್ಯಾಯಾಲಯದ ಮುಂದಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಯಿತು ಅದರಂತೆ ಮೇಲ್ಕಂಡ ಅಂಶಗಳಿಗೆ ಈ ಕೆಳಕಾಣಿಸಿದಂತೆ ಉತ್ತರಿಸಲಾಗಿದೆ ಃ -

ಅಂಶ ನಂ.1 ಃ ನಕಾರಾತ್ಮಕವಾಗಿ

ಅಂಶ ನಂ.2 ಃ ನಕಾರಾತ್ಮಕವಾಗಿ

ಅಂಶ ನಂ.3 ಃ ನಕಾರಾತ್ಮಕವಾಗಿ

ಅಂಶ ನಂ.4 ಃ ಅಂತಿಮ ಆದೇಶದಂತೆ, ಈ ಕೆಳಕಂಡ

## ಕಾ ರ ಣ ಗ ಳು

**10.** **ಅಂಶ ಸಂಖ್ಯೆ: 1 ಮತ್ತು 2:-** ಮೊದಲ ನೋಟಕ್ಕೆ ಸಮ್ಮತವಾದ ಮೊಕ್ಕದ್ದಮೆ ಮತ್ತು ಅನುಕೂಲತೆಯ ಒಲವು: ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವ ಪ್ರಮುಖ ಉದ್ದೇಶವು ಪಕ್ಷಗಾರರಿಗೆ ನೀಡುವಂತಹ ಕಾನೂನು ಬದ್ದ ಹಕ್ಕುಗಳು ಮತ್ತು ಸದರಿ ಹಕ್ಕುಗಳಿಗೆ ಸಂಬಂಧಿಸಿದ ವ್ಯಾಜ್ಯಗಳು ಸಂಪೂರ್ಣವಾಗಿ ತೀರ್ಮಾನವಾಗುವವರೆಗೆ ಸ್ವತ್ತನ್ನು ಯಥಾಸ್ಥಿತಿಯಲ್ಲಿ ಕಾಪಾಡುವುದು. ತಾತ್ಕಾಲಿಕ ನಿರ್ಬಂಧಕಾಜ್ಞೆಯ ಅರ್ಜಿಯನ್ನು ತೀರ್ಮಾನಿಸುವಾಗ ನ್ಯಾಯಾಲಯವು ಸದರಿ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ನೀಡುವುದರಿಂದ ಯಾವ ರೀತಿ ಪರಿಣಾಮಗಳು ಪಕ್ಷಗಾರರ ಹಿತಾಸಕ್ತಿಯ ಮೇಲೆ ಪರಿಣಾಮವನ್ನುಂಟುಮಾಡುತ್ತವೆ ಎಂಬುದನ್ನು ಪರಿಗಣಿಸುವುದು ಅವಶ್ಯಕವಾಗಿರುತ್ತದೆ. ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವು ನ್ಯಾಯಸಮ್ಮತವಾದ ಪರಿಹಾರವಾಗಿದ್ದು, ಸದರಿ ಪರಿಹಾರವನ್ನು ನೀಡುವುದು ನ್ಯಾಯಾಲಯದ ವಿವೇಚನಾತ್ಮಕವಾದ ಅಧಿಕಾರವಾಗಿರುತ್ತದೆ. ಆದರೆ ಸದರಿ ವಿವೇಚನಾತ್ಮಕ ಅಧಿಕಾರವನ್ನು ನ್ಯಾಯಾಲಯವು ನಿರಂಕುಶ ರೀತಿಯಲ್ಲಿ ಚಲಾಯಿಸುವಂತದ್ದಾಗಿರುವುದಿಲ್ಲ. ಅಂದರೆ ನ್ಯಾಯಾಲಯವು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬೇಕಾದರೆ ವಾದಿಯು ನ್ಯಾಯಾಲಯಕ್ಕೆ ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ತೋರ್ಪಡಿಸುವರೇ. ನ್ಯಾಯಾಲಯಕ್ಕೆ ವಾದಿಯು ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ತಂದಿರುತ್ತಾರೆಯೇ ಎನ್ನುವ ಅಂಶವನ್ನು ಪರಿಗಣಿಸಲು ಮುಂದಾಗಿರುತ್ತದೆ.

Visit **ecourts.gov.in** for updates or download mobile app “**eCourts Services**” from Android or iOS

**11.** ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆ ಎಂದರೆ ನ್ಯಾಯಾಲಯಕ್ಕೆ ವಾದಿಯು ತಂದಿರುವ ವ್ಯಾಜ್ಯದಲ್ಲಿ ತಿರುಳು ಇದ್ದು, ಸದರಿ ವ್ಯಾಜ್ಯವನ್ನು ಸದುದ್ದೇಶದಿಂದ ಮಾಡಿದ್ದು, ವಾದಿಯ ವ್ಯಾಜ್ಯವು ವಿಚಾರಣೆಗೆ ಯೋಗ್ಯವಾಗಿದೆ ಎಂದು, ನ್ಯಾಯಾಲಯಕ್ಕೆ ಮನವರಿಕೆಯಾಗಬೇಕಾಗುತ್ತದೆ. ಮುಂದುವರೆದು ವಾದಿಯು ಈ ನ್ಯಾಯಾಲಯದಿಂದ ಅಂತಿಮ ಪರಿಹಾರವನ್ನು ಪಡೆದುಕೊಳ್ಳುವ ಸಂಭವವಿರುತ್ತದೆ ಎನ್ನುವ ವಿಚಾರವು ಸಹ ಮೊದಲ ನೋಟಕ್ಕೆ ಕಾಣಿಸಬೇಕಾಗಿರುವುದು ಅವಶ್ಯಕವಾಗಿರುತ್ತದೆ. ಅಂದರೆ ವಾದಿಯು ಮೊದಲ ನೋಟಕ್ಕೆ ಹಕ್ಕು ತನ್ನ ಪರವಾಗಿದ್ದು, ಸದರಿ ಮೊದಲ ನೋಟದ ಹಕ್ಕನ್ನು ಪ್ರತಿವಾದಿಯು ವ್ಯತಿಕ್ರಮಣ ಮಾಡಿದ್ದಾರೆಂದು ನ್ಯಾಯಾಲಯದ ಗಮನಕ್ಕೆ ಬಂದರೆ ನ್ಯಾಯಾಲಯವು ವಾದಿಯ ಪರವಾಗಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಬಹುದಾಗಿರುತ್ತದೆ. ಈ ಹಂತದಲ್ಲಿ ವಾದಿಯು ತನ್ನ ಪರವಾಗಿ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆ ಇದೆ ಎಂಬುದನ್ನು ಈ ಹಂತದಲ್ಲಿ ತೋರ್ಪಡಿಸುವ ಹೊಣೆಗಾರಿಕೆ ವಾದಿಯ ಮೇಲಿರುತ್ತದೆ. ಈ ನ್ಯಾಯಾಲಯವು ಸ್ಪಷ್ಟಪಡಿಸುವುದೇನೆಂದರೆ, ಈ ಹಂತದಲ್ಲಿ ನ್ಯಾಯಾಲಯವು ಕೇವಲ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ಮಾತ್ರ ಪರಿಶೀಲಿಸುತ್ತಿದ್ದು, ಪಕ್ಷಗಾರರ ಮೊದಲ ನೋಟದ ಸಾಮ್ಯವನ್ನಲ್ಲ.

**12.** ಈ ಹಂತದಲ್ಲಿ ನ್ಯಾಯಾಲಯವು ಧೀರ್ಘವಾದ ವಿಚಾರಣೆ ಮಾಡುವುದು ನಿಶಿದ್ಧವಾಗಿದ್ದು, ಪಕ್ಷಗಾರರ ದಾವಾ ಆಸ್ತಿ ಮತ್ತು ಪ್ರತಿವಾದಿಗಳ ಆಸ್ತಿಯ ಮೇಲಿನ ಸ್ವಾಮ್ಯದ ಮೇಲೆ ಚರ್ಚಿಸುವಂತಿಲ್ಲ. ಈ ಮೂಲ ತತ್ವದಡಿ ಈ ಮೊಕದ್ದಮೆಯ ಸನ್ನಿವೇಶವನ್ನು ನೋಡುವುದಾದರೆ ವಾದಿಯು ದಾವಾ ಸ್ವತ್ತನ್ನು 2022 ರಿಂದಲೂ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬರುತ್ತಿರುವುದಾಗಿ ತಿಳಿಸಿದ್ದು. ದಾವಾ ಸ್ವತ್ತನ್ನು ದಿನಾಂಕ 06.10.2022 ರಂದು ವಾದಿಯು ಫಿಲಿಪ್ಸ್ ಬಿನ್ ಪಾಲ್ ವೇದಮೂರ್ತಿರವರಿಂದ ಖರೀದಿಸಿದ್ದು, ವಾದಿಯೇ ಮಾಲೀಕನಾಗಿರುವುದಾಗಿ ತಿಳಿಸಿರುತ್ತಾರೆ. ದಾವಾ ಸ್ವತ್ತಿಗೆ

ಸಂಬಂದಿಸಿದಂತೆ ವಾದಿಯೇ ಅಭಿವೃದ್ದಿ ಮಾಡಿ ಹಣ್ಣಿನ ಗಿಡಗಳನ್ನು ಮತ್ತು ಅಡಿಕೆ ಗಿಡಗಳನ್ನು ಹಾಕಿ ಮತ್ತು ಕಲ್ಲುಕಂಬ ಮತ್ತು ತಂತಿಬೇಲಿಯಿಂದ ದಾವಾ ಸ್ವತ್ತನ್ನು ರಕ್ಷಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಪ್ರತಿವಾದಿಯು ತನ್ನ ಜಮೀನಿನಲ್ಲಿ ಸರ್ವೇ ನಂಬರ್ 39 ರಲ್ಲಿರುವ ಸ್ಮಶಾನಕ್ಕೆ ಹೋಗಲು ದಾರಿಯನ್ನು ಮಾಡಲು ಪ್ರಯತ್ನಿಸುತ್ತಿರುವುದಾಗಿ ತಿಳಿಸಿರುತ್ತಾರೆ. ತನ್ನ ದಾವಾ ಸ್ವತ್ತಿನ ಪಕ್ಕದಲ್ಲಿ ಈಗಾಗಲೇ ದಾರಿ ಇದ್ದು ಮತ್ತೊಂದು ದಾರಿ ಮಾಡುವ ಅವಶ್ಯಕತೆ ಇಲ್ಲವೆಂದು ವಾದಿಯು ತಿಳಿಸಿರುತ್ತಾರೆ. ಗ್ರಾಮದ ಜನರು 2003 ರಲ್ಲೇ ಸ್ಮಶಾನಕ್ಕೆ ದಾರಿಗಾಗಿ ಅರ್ಜಿಸಲ್ಲಿಸಿ ದಾರಿಯನ್ನು ಬಿಡಿಸಿಕೊಂಡಿರುವುದಾಗಿ ತಿಳಿಸಿದ್ದು, ಆದ್ದರಿಂದ ತಾನು ತಂದಿರುವ ಮದ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

**13**. ಇದಕ್ಕೆ ಸಂಬಂದಿಸಿದಂತೆ ವಾದಿಯು ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ದಾವಾ ಆಸ್ತಿಯನ್ನು ವಾದಿಗೆ ದಿನಾಂಕ 06.10.2022 ರಂದು ಫಿಲಿಪ್ಸ್ ಮತ್ತು ಕುಂಟುಂಬದವರು ಬರೆದುಕೊಟ್ಟ ನೋಂದಾಯಿತ ಕ್ರಯಪತ್ರದ ಜೆರಾಕ್ಸ್ ನ್ನು ಹಾಜರುಪಡಿಸಿರುತ್ತಾರೆ. ದಾವಾ ಆಸ್ತಿಗೆ ಸಂಬಂದಿಸಿದಂತೆ ಋಣಭಾರ ರಾಹಿತ್ಯ ಪ್ರಮಾಣ ಪತ್ರದ ಜೆರಾಕ್ಸ್ ನಕಲನ್ನು ಹಾಜರುಪಡಿಸಿರುತ್ತಾರೆ. ದಾವಾ ಸ್ವತ್ತಿಗೆ ಸಂಬಂದಿದಂತಹ ವಾದಿಯ ಹೆಸರಿನಲ್ಲಿರುವ ಪಹಣಿಪತ್ರಿಕೆಯನ್ನು ಹಾಜರುಪಡಿಸಿರುತ್ತಾರೆ. ಫಿಲಿಪ್ಸ್ ರವರಿಗೆ ದಾವಾ ಸ್ವತ್ತು ಕ್ರಯವಾದ ಬಗ್ಗೆ ಕ್ರಯಪತ್ರದ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಚಿಕ್ಕಮಗಳೂರಿನ ಜಿಲ್ಲಾಧಿಕಾರಿಗಳು ಸತ್ಯಪ್ರಮೀಳಾಂಬ ರವರಿಗೆ ನೀಡಿದ ಹಿಂಬರಹದ ಜೆರಾಕ್ಸ್ ನಕಲನ್ನು ಹಾಜರುಪಡಿಸಿರುತ್ತಾರೆ. ಸತ್ಯಪ್ರಮೀಳಾಂಬರವರು ನೀಡಿದ ಅರ್ಜಿಯ ಮೇರೆಗೆ ಕಡೂರು ತಹಶೀಲ್ದಾರ್ ರವರು ದಾರಿ ಬಿಡಿಸಿಕೊಟ್ಟ ಬಗ್ಗೆ ಪತ್ರದ ಜೆರಾಕ್ಸ್ ನಕಲನ್ನು ಹಾಜರುಪಡಿಸಿರುತ್ತಾರೆ. ಎಸ್.ಬೊಮ್ಮೇನಹಳ್ಳಿ ಗ್ರಾಮದ ಸರ್ವೇ ನಂಬರ್ 38 ರಲ್ಲಿ ನಕಾಶೆಯಲ್ಲಿ ಕಂಡಂತಹ ದಾರಿಯ ಬಗ್ಗೆ ನಕಾಶೆಯ ಜೆರಾಕ್ಸ್ ನಕಲನ್ನು

Visit **ecourts.gov.in** for updates or download mobile app “**eCourts Services**” from Android or iOS

ಹಾಜರುಪಡಿಸಿರುತ್ತಾರೆ ಮತ್ತು ಎಸ್. ಬೊಮ್ಮೇನಹಳ್ಳಿ ಗ್ರಾಮಸ್ಥರು ಸರ್ವೇ ನಂಬರ್ 38 ಕ್ಕೆ ಸಂಬಂದಿಸಿದಂತೆ ನೀಡಿದ ಹೇಳಿಕೆಯ ಜೆರಾಕ್ಸ್ ನಕಲನ್ನು ಹಾಜರುಪಡಿಸಿರುತ್ತಾರೆ. ಆದರೆ ವಾದಿಯು ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಮತ್ತು ರಸ್ತೆಗೆ ಸಂಬಂದಿಸಿದಂತೆ ಇರುವ ಯಾವುದೇ ಛಾಯಾಚಿತ್ರಗಳನ್ನು ಹಾಜರುಪಡಿಸಿರುವುದಿಲ್ಲ.

**14**. ಪ್ರತಿವಾದಿಯು ತನ್ನ ತಕರಾರಿನಲ್ಲಿ ಎಸ್.ಬೊಮ್ಮೇನಹಳ್ಳಿ ಗ್ರಾಮದ ಸರ್ವೇ ನಂಬರ್ 39 ರಲ್ಲಿರುವ ರುದ್ರಭೂಮಿ ಮತ್ತು ಗೋಕಟ್ಟೆಗೆ ಸಂಪರ್ಕಿಸುವ ಬಂಡಿದಾರಿಯನ್ನು ಸರ್ವೇ ನಂಬರ್ 38 ರಲ್ಲಿರುವ ಖಾತೆದಾರರು ಒತ್ತುವರಿ ಮಾಡಿಕೊಂಡು ತೊಂದರೆ ಮಾಡುತ್ತಿದ್ದಾರೆಂದು, ಸದರಿ ಒತ್ತುವರಿ ಆಗಿರುವ ಪ್ರದೇಶವನ್ನು ಗುರುತಿಸಿ ಒತ್ತುವರಿ ಜಾಗವನ್ನು ತೆರವು ಗೊಳಿಸುವಂತೆ ಗ್ರಾಮಸ್ಥರು ತಹಶೀಲ್ದಾರ್ ರವರ ಕಛೇರಿಗೆ ಲಿಖಿತ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ತಹಶೀಲ್ದಾರ್ ರವರು ಸರ್ವೇ ನಂಬರ್ 38 ರಲ್ಲಿರುವ ಖಾತೆದಾರರಿಗೆ ದಿನಾಂಕ 28.12.2023 ರಂದು ಒತ್ತುವರಿಯನ್ನು ತೆರವುಗೊಳಿಸಲು ನೋಟೀಸನ್ನು ನೀಡಿರುವುದಾಗಿ ತಿಳಿಸಿರುತ್ತಾರೆ. ಸದರಿ ವಿಚಾರವಾಗಿ ಬಂಡಿ ದಾರಿಯನ್ನು ಗುರುತಿಸಿ ಒತ್ತುವರಿ ಕಂಡುಬಂದಲ್ಲಿ ಒತ್ತುವರಿದಾರರ ವಿವರದೊಂದಿಗೆ ಸರ್ವೇ ನಕ್ಷೆಯನ್ನು ಸಲ್ಲಿಸಲು ತಾಲ್ಲೂಕು ಭೂಮಾಪಕರು ಹಾಗೂ ಸಖರಾಯಪಟ್ಟಣ ಹೋಬಳಿ ರಾಜಸ್ವ ನಿರೀಕ್ಷಕರಿಗೆ ಪತ್ರ ಬರೆಯಲಾಗಿರುತ್ತದೆ. ಸದರಿಯವರು ಸ್ಥಳ ಪರಿಶೀಲಿಸಿ ಎಸ್.ಬೊಮ್ಮೇನಹಳ್ಳಿ ಗ್ರಾಮದ ಸರ್ವೇ ನಂಬರ್ 39 ರಲ್ಲಿರುವ ರುದ್ರಭೂಮಿಯನ್ನು ಸಂಪರ್ಕಿಸುವ ಬಂಡಿದಾರಿಯನ್ನ ಸರ್ವೇ ನಂಬರ್ 38/5 ರ ಆರ್.ಟಿ.ಸಿ.ದಾರರು ಹಾಗೂ ಸರ್ವೇ ನಂಬರ್ 40/1 ರ ಆರ್.ಟಿ.ಸಿ.ದಾರರು ಒತ್ತುವರಿ ಮಾಡಿಕೊಂಡಿರುತ್ತಾರೆಂದು ನಕ್ಷೆಯಲ್ಲಿ ನಮೂದಿಸಿ ಸರ್ವೇ ನಕ್ಷೆಯನ್ನು ತಯಾರಿಸಿ ಗ್ರಾಮಸ್ಥರ ಸಮಕ್ಷಮ ಮಹಜರುಕ್ರಮ ಜರುಗಿಸಿ ಸದರಿ ದಾಖಲಾತಿಗಳನ್ನು ತಹಶೀಲ್ದಾರ್ ರವರ ಕಛೇರಿಗೆ ಸಲ್ಲಿಸಿರುತ್ತಾರೆಂದು

Visit **ecourts.gov.in** for updates or download mobile app “**eCourts Services**” from Android or iOS

ತಿಳಿಸಿರುತ್ತಾರೆ. ಒತ್ತುವರಿದಾರರು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿದ್ದು ಅವರು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ಸರ್ಕಾರಿ ಜಮೀನಿನ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. ಹೀಗಿರುವಾಗ ವಾದಿಯು ಸರ್ಕಾರ ವಿರುದ್ದ ನಿರ್ಬಂಧಕಾಜ್ಞೆಯನ್ನು ಕೋರಿ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸುವುದರಿಂದ ಸರ್ಕಾರಕ್ಕೆ ಮತ್ತು ಸಾರ್ವಜನಿಕರಿಗೆ ಹೆಚ್ಚು ಹಾನಿಯಾಗುವ ಸಂಭವವಿರುತ್ತದೆ. ಆದ್ದರಿಂದ ವಾದಿ ತಂದಿರುವ ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೋರಿ ಅದಕ್ಕೆ ಸಂಬಂದಿಸಿದಂತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲಾತಿಗಳೆಂದರೆ ಎಸ್.ಬೊಮ್ಮೇನಹಳ್ಳಿ ಗ್ರಾಮದ ಗ್ರಾಮಸ್ಥರು ತಹಶೀಲ್ದಾರ್ ರವರ ಕಛೇರಿಗೆ ಒತ್ತುವರಿ ತೆರವುಗೊಳಿಸಲು ಸಲ್ಲಿಸಿರುವ ಮನವಿಯ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ತಹಶೀಲ್ದಾರ್ ರವರು ಒತ್ತುವರಿದಾರರಿಗೆ ನೀಡಿದ ನೋಟೀಸ್ ನ ಜೆರಾಕ್ಸ್ ನ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಭೂಮಾಪಕರು ಮತ್ತು ರಾಜಸ್ವ ನಿರೀಕ್ಷಕರು, ಸಖರಾಯಪಟ್ಟಣ ಇವರು ಒತ್ತುವರಿ ಜಾಗದ ನಕ್ಷೆ ತಯಾರಿಸಿ ನೀಡಿದ ವರದಿಯ ಜೆರಾಕ್ಸ್ ನಕಲನ್ನು ಹಾಜರುಪಡಿಸಿರುತ್ತಾರೆ.

**15.** ವಾದಿ ಮತ್ತು ಪ್ರತಿವಾದಿಯ ಮೇಲಿನ ವಾದ ಮತ್ತು ವಿವಾದವನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಿದ ನಂತರ ನ್ಯಾಯಾಲಯಕ್ಕೆ ಮೇಲ್ನೋಟಕ್ಕೆ ಕಂಡುಬರುವುದೇನೆಂದರೆ, ಸದರಿ ದಾವೆಯು ಪ್ರಾರಂಭಿಕ ಹಂತದಲ್ಲಿದ್ದು, ಈ ಹಂತದಲ್ಲಿ ನ್ಯಾಯಾಲಯವು ಕೇವಲ ನ್ಯಾಯಾಲಯದ ಮುಂದಿರುವ ವಾದಿ ಮತ್ತು ಪ್ರತಿವಾದಿ ಪರ ದಾಖಲಾತಿಗಳನ್ನು ನೋಡಿ ಮೇಲ್ನೋಟಕ್ಕೆ ಕಂಡುಬರುವಂತೆ ತೀರ್ಮಾನಿಸುವುದು ಸೂಕ್ತವೆಂದು ಪರಿಗಣಿಸಿರುತ್ತದೆ.

**16.** ವಾದಿ ಪರ ವಕೀಲರು ತಿಳಿಸಿದಂತೆ ದಾವಾ ಸ್ವತ್ತಿನ ಪಕ್ಕದಲ್ಲಿ ಈಗಾಗಲೇ ದಾರಿ ಇದ್ದು ಮತ್ತೊಂದು ದಾರಿಯನ್ನು ಮಾಡಲು ಪ್ರಯತ್ನಿಸಿರುತ್ತಾರೆಂದು ಅವರ ವಾದವಾಗಿರುತ್ತದೆ. ಆದರೆ, ಈ ದಾವೆಯಲ್ಲಿ ಪ್ರತಿವಾದಿ ಪರ ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ

Visit **ecourts.gov.in** for updates or download mobile app “**eCourts Services**” from Android or iOS

ಎಸ್.ಬೊಮ್ಮೇನಹಳ್ಳಿ ಗ್ರಾಮದ ಸರ್ವೇ ನಂಬರ್ 39 ರಲ್ಲಿರುವ ಸ್ಮಶಾನಕ್ಕೆ ಹೋಗಲು ಇರುವ ದಾರಿಯನ್ನು ಒತ್ತುವರಿ ಮಾಡಿರುತ್ತಾರೆಂಬುದಾಗಿರುತ್ತದೆ. ಸದರಿ ಒತ್ತುವರಿಯ ಬಗ್ಗೆ ಕಡೂರಿನ ತಹಶೀಲ್ದಾರರವರು, ಭೂಮಾಪಕರು ಮತ್ತು ರಾಜಸ್ವ ನಿರೀಕ್ಷಕರು ಸಖರಾಯಪಟ್ಟಣರವರಿಗೆ ಒತ್ತುವರಿ ಜಾಗದ ನಕಾಶೆಯನ್ನು ತಯಾರಿಸಿ ವರದಿಯನ್ನು ನೀಡಲು ತಿಳಿಸಿದ್ದು ಅದರಂತೆ ಭೂಮಾಪಕರು ಮತ್ತು ರಾಜಸ್ವ ನಿರೀಕ್ಷಕರು ಸಖರಾಯಪಟ್ಟಣ ಇವರು ಸರ್ವೇ ನಂಬರ್ 39 ರಲ್ಲಿರುವ ರುದ್ರಭೂಮಿಯನ್ನು ಸಂಪರ್ಕಿಸಲು ಇರುವ ಬಂಡಿದಾರಿಯನ್ನ ಸರ್ವೇ ನಂಬರ್ 38/5 ಮತ್ತು 40/1 ರ ಆರ್.ಟಿ.ಸಿ ದಾರರು ಒತ್ತುವರಿ ಮಾಡಿರುತ್ತಾರೆಂದು ವರದಿ ಮತ್ತು ನಕ್ಷೆಯನ್ನು ತಯಾರಿಸಿ ವರದಿಯನ್ನು ನೀಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಇದಕ್ಕೆ ಸಂಬಂದಿಸಿದಂತೆ ಸರ್ವೇ ನಂಬರ್ 38/5 ರ ಆರ್.ಟಿ.ಸಿ.ದಾರರಾದ ವಾದಿಗೆ ನೋಟೀಸನ್ನು ಸಹ ನೀಡಿರುವುದು ಕಂಡುಬಂದಿರುತ್ತದೆ. ಎಸ್.ಬೊಮ್ಮೇನಹಳ್ಳಿ ಗ್ರಾಮಸ್ಥರು ಸ್ಮಶಾನಕ್ಕೆ ಹೋಗುವ ದಾರಿಯನ್ನು ಒತ್ತುವರಿ ಮಾಡಿರುವುದನ್ನು ತಹಶೀಲ್ದಾರ್ ರವರಿಗೆ ಮನವಿಯನ್ನು ಸಲ್ಲಿಸಿದ್ದು, ಸದರಿ ಮನವಿಯ ಆಧಾರದ ಮೇಲೆ ಸಾರ್ಜಜನಿಕ ಹಿತದೃಷ್ಟಿಯಿಂದ ಕಡೂರಿನ ತಹಶೀಲ್ದಾರ್ ರವರು ಕ್ರಮಕೈಗೊಂಡಿರುವುದು ಸೂಕ್ತವಾಗಿರುತ್ತದೆಂದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ ಮತ್ತು ವಾದಿಯ ತನ್ನ ವಾದ ಪತ್ರದಲ್ಲಿ ತಿಳಿಸಿದ ಅಂಶಗಳನ್ನು ರುಜುವಾತುಪಡಿಸಲು ದಾವೆಯ ವಿಚಾರಣೆಯಾಗಬೇಕಾಗಿರುವುದು ಅವಶ್ಯಕವಾಗಿರುತ್ತದೆ ಮತ್ತು ವಾದಿಯ ಮದ್ಯಂತರ ಅರ್ಜಿ 2 ಕ್ಕೆ ಸಂಬಂದಿಸಿದಂತೆ ತಾನು ಯಾವುದೇ ಸರ್ಕಾರಿ ದಾರಿಯನ್ನು ಒತ್ತುವರಿ ಮಾಡಿರುವುದಿಲ್ಲವೆಂದು ಸಾಬೀತುಪಡಿಸಬೇಕಾಗಿರುತ್ತದೆ ಮತ್ತು ಸರ್ಕಾರದ ದಾರಿಗೆ ಸಂಬಂದಿಸಿದಂತೆ ಸರ್ಕಾರವು ಸಾರ್ವಜನಿಕ ಹಿತದೃಪಷ್ಟಿಯಿಂದ ಯಾವುದೇ ಕ್ರಮಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಅಧಿಕಾರ ಇರುತ್ತದೆ.

**17**. ಈ ನ್ಯಾಯಾಲಯದ ಮುಂದಿರುವ ದಾವೆಯನ್ನು ವಾದಿಯು ಪ್ರತಿವಾದಿಯ ವಿರುದ್ದ ಶಾಶ್ವತ ನಿರ್ಬಂಧಕಾಜ್ಞೆಯ ಆದೇಶವನ್ನು ಕೇಳಿ

Visit **ecourts.gov.in** for updates or download mobile app "**eCourts Services**" from Android or iOS

ಸಲ್ಲಿಸಿದ್ದು, ಮಧ್ಯಂತರ ಅರ್ಜಿ ಸಂಖ್ಯೆ - 2 ನ್ನು ಪ್ರತಿವಾದಿಯ ವಿರುದ್ದ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಕೋರಿ ಸಲ್ಲಿಸಿದ್ದು, ಈ ಹಂತದಲ್ಲಿ ನ್ಯಾಯಾಲಯವು ಇದಕ್ಕೆ ಸಂಬಂಧಿಸಿದಂತೆ ಮಾತ್ರ ಗಮನಿಸಬೇಕಾಗಿರುವುದು ಸೂಕ್ತವಾಗಿರುತ್ತದೆ. ಆದ್ದರಿಂದ ವಾದಿಯು ಸಲ್ಲಿಸಿರುವ ದಾವೆಗೆ ಸಂಬಂಧಿಸಿದಂತೆ ಹಾಜರುಪಡಿಸಿರುವ ದಾಖಲಾತಿಗಳಿಂದ ವಾದಿಯು ಮೇಲ್ನೋಟಕ್ಕೆ ನ್ಯಾಯಸಮ್ಮತ ವಾದ ದಾವೆಯನ್ನು ತಂದಿರುವುದಿಲ್ಲವೆಂದು ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಿದರೆ ಇದರಿಂದ ಸರ್ಕಾರಕ್ಕೆ ಮತ್ತು ಸಾರ್ವಜನಿಕರಿಗೆ ತುಂಬಲಾರದ ನಷ್ಟ ಮತ್ತು ಅನ್ಯಾಯವಾಗುತ್ತದೆ ಎಂದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಅನುಕೂಲತೆಯ ಒಲವು ವಾದಿಯ ಪರವಾಗಿ ಇರುವುದಿಲ್ಲವೆಂದು ಅಭಿಪ್ರಾಯಪಡುತ್ತ ಅಂಶ-1 ಮತ್ತು 2 ನ್ನು **ನಕಾರಾತ್ಮಕವಾಗಿ** ಉತ್ತರಿಸಿರುತ್ತದೆ.

**18.**<u>ಅಂಶ ಸಂಖ್ಯೆ: **3:** ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿ</u>

ನ್ಯಾಯಸಮ್ಮತವಾದ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆಯಲು ವಾದಿಯು ಕೇವಲ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯು ತನ್ನ ಪರವಾಗಿದೆ ಎಂದು ಮತ್ತು ಅನುಕೂಲತೆಯ ಒಲವು ತನ್ನ ಪರವಾಗಿದೆ ಎಂದು ನಿರೂಪಿಸುವುದರ ಜೊತೆಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ತನ್ನ ಪರವಾಗಿ ನೀಡದಿದ್ದರೆ ತನಗೆ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿ ಉಂಟಾಗುತ್ತದೆ ಎಂದು ನಿರೂಪಿಸುವುದು ಅವಶ್ಯವಾಗಿರುತ್ತದೆ. ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿ ಎಂದರೆ ವಾದಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ನೀಡದೆ ಹೋದರೆ ಆತನಿಗೆ ಆಗುವ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿಯನ್ನು ಹಣದ ರೂಪದಲ್ಲಾಗಲೀ ಅಥವಾ ಇನ್ಯಾವುದೇ ರೂಪದಲ್ಲಾಗಲೀ ನೀಡಿ ಸರಿಪಡಿಸಲಾಗದು ಎನ್ನುವ ಸಂದರ್ಭವಿದ್ದರೆ ಅಂತಹ ಸಂದರ್ಭವನ್ನು ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿ ಎಂದು

Visit **ecourts.gov.in** for updates or download mobile app "**eCourts Services**" from Android or iOS

ಹೇಳಬಹುದು. ಈ ನ್ಯಾಯಾಲಯವು 1 ಮತ್ತು 2 ನೇ ಅಂಶಗಳನ್ನು ಚರ್ಚಿಸುವ ಕಾಲಕ್ಕೆ ವಾದಿಯು ಮೊದಲ ನೋಟಕ್ಕೆ ನ್ಯಾಯ ಸಮ್ಮತವಾದ ಮೊಕದ್ದಮೆಯನ್ನು ತೋರ್ಪಡಿಸಿಲ್ಲದಿರುವುದರಿಂದ ಮತ್ತು ಅನುಕೂಲತೆಯ ಒಲವು ತನ್ನ ಪರವಾಗಿದೆ ಎಂದು ನಿರೂಪಿಸಿರುವುದಿಲ್ಲವಾದ್ದರಿಂದ ನ್ಯಾಯಾಲಯವು ಈ ಅಭಿಪ್ರಾಯಕ್ಕೆ ಬಂದಿರುತ್ತದೆ. ವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನಾನುಭವಕ್ಕೆ ಪ್ರತಿವಾದಿ ತೊಂದರೆ ಕೊಡುವುದರಿಂದ ವಾದಿಗೆ ಸಾಕಷ್ಟು ನಷ್ಟ ಆಗುವ ಸಾಧ್ಯತೆ ಇರುತ್ತದೆ ಎಂದು ಮೇಲ್ನೋಟಕ್ಕೆ ಕಂಡು ಬಂದಿರುವುದಿಲ್ಲ.

**19.** ಈ ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ, ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ವಾದಿಯ ಪರವಾಗಿ ನೀಡಿದ್ದಲ್ಲಿ ಸಾರ್ವಜನಿಕರಿಗೆ ತುಂಬಲಾರದ ನಷ್ಟವುಂಟಾಗುತ್ತದೆ ಎಂದು ಅಭಿಪ್ರಾಯಕ್ಕೆ ಬಂದು ಉಭಯ ಪಕ್ಷಗಾರರ ಸಂಗತಿಗಳನ್ನು ತುಲನಾತ್ಮಕವಾಗಿ ನೋಡಿದಾಗ, ಅಂಶ -1 ಮತ್ತು 2 ರಲ್ಲಿ ತಿಳಿಸಿದ ಕಾರಣದಿಂದಾಗಿ ಈ ದಾವೆಯ ಅನುಕೂಲತೆ ಒಲವು ವಾದಿಯ ಪರವಾಗಿರುವುದಿಲ್ಲ ಎಂದು ಸ್ಪಷ್ಟವಾಗುತ್ತದೆ. ಈ ಅರ್ಜಿಯನ್ನು ಪುರಸ್ಕರಿಸದಿದ್ದರೆ ವಾದಿಗೆ ನಷ್ಟ ಆಗುವುದಕ್ಕಿಂತ ಸಾರ್ವಜನಿಕರಿಗೆ ಹೆಚ್ಚಿನ ಪ್ರಮಾಣದಲ್ಲಿ ನಷ್ಟ ಉಂಟಾಗುತ್ತದೆ ಎನ್ನುವ ಅಭಿಪ್ರಾಯಕ್ಕೆ ಬಂದು **ಅಂಶ-3 ನ್ನು ನಕಾರಾತ್ಮಕವಾಗಿ** ಉತ್ತರಿಸುತ್ತದೆ.

**20.** ಈ ಮೇಲಿನ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ, ನ್ಯಾಯಾಲಯಕ್ಕೆ ಮೇಲ್ನೋಟಕ್ಕೆ ವಾದಿಯ ದಾವಾ ಸ್ವತ್ತಿಗೆ ಪ್ರತಿವಾದಿಯು ತೊಂದರೆ ನೀಡುತ್ತಿರುವುದು ಕಂಡು ಬಂದಿರುವುದಿಲ್ಲ. ಆದ್ದರಿಂದ ಪ್ರತಿವಾದಿಯ ವಿರುದ್ಧ ತಾತ್ಕಾಲಿಕವಾಗಿ ನಿರ್ಬಂಧಿಸುವುದು ಸೂಕ್ತವಲ್ಲವೆಂದು ನ್ಯಾಯಾಲಯವು ನಿರ್ಣಯಕ್ಕೆ ಬರುತ್ತದೆ. ಆದ್ದರಿಂದ ಈ ಮೇಲ್ಕಂಡ ಅಂಶ 1 ರಿಂದ 3 ನ್ನು **ನಕಾರಾತ್ಮಕ** ಎಂದು ನಿರ್ಣಯಿಸಲಾಗಿದೆ.

Visit **ecourts.gov.in** for updates or download mobile app "**eCourts Services**" from Android or iOS

**21.** **<u>ಅಂಶ 4</u>**:- ಈ ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**<u>ಆದೇಶ</u>**

ವಾದಿ/ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿದಂತಹ ಮಧ್ಯಂತರ ಅರ್ಜಿ ಸಂಖ್ಯೆ-2 ನ್ನು ಖರ್ಚುಸಹಿತ ತಿರಸ್ಕರಿಸಲಾಗಿದೆ.

**(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 21 ನೇ ಜನವರಿ, 2024 ರಂದು ಉದ್ಘೋಷಿಸಲಾಯಿತು)**

ಸಹಿ/-
(ಶ್ರೀಮತಿ ಸವಿತರಾಣಿ ಹೆಚ್.ವಿ.)
C/c. 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಕಡೂರು.

Visit **ecourts.gov.in** for updates or download mobile app “**eCourts Services**” from Android or iOS